# <u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.</u>

**OS No.**363/2018

**PW**:3

**ದಿನಾಂಕ 06.01.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್.ವಿ.ಕೆ. ವಕೀಲರಿಂದ:</u>**

ನನಗೆ ಸಾಲೋಟಗಿಯಲ್ಲಿ ಸರ್ವೆ ನಂ.623 ಜಮೀನು ಇರುತ್ತದೆ. 2 ನೇ ವಾದಿಯ ಜಮೀನಿನ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂ.636 ಇದು ವಾದಿಯರ ಪಿತ್ರಾರ್ಜಿತ ಜಮೀನು ಇರುತ್ತದೆ. 2 ನೇ ವಾದಿಯ ಜಮೀನಿನ ದಕ್ಷೀಣ ದಿಕ್ಕಿಗೆ ಬೇರೆಯವರ ಜಮೀನು ಇರುತ್ತದೆ. 1 ನೇ ವಾದಿಯ ಜಮೀನಿನ ಪೂರ್ವ ದಿಕ್ಕಿಗೆ ರಸ್ತೆ ಇರುತ್ತದೆ. ಸದರಿ ರಸ್ತೆಯು ಸಾಲೋಟಗಿಯಿಂದ ನಾದ ಗ್ರಾಮಕ್ಕೆ ಹೋಗುತ್ತದೆ. ಅದೇ ರಸ್ತೆಯು ಮುಂದೆ ಸಂಬೋಗಿಗೆ ಹೋಗುತ್ತದೆ ಎಂದರೆ ಸರಿ. 1 ನೇ ವಾದಿಯ ಜಮೀನಿಗೆ ಹೊಂದಿಕೊಂಡಂತೆ ಶಿರಶ್ಯಾಡ ಜೋಡ ಸೀಮೆ ರಸ್ತೆ ಇರುತ್ತದೆ ಎಂದರೆ ಸರಿ. ವಾದಿಯರು ಸಾಲೋಟಗಿ ಸಂಬೋಗಿ ರಸ್ತೆಯ ಮುಖಾಂತರ ಬಂದು ಶಿರಶ್ಯಾಡ ಜೋಡು ಸೀಮೆ ರಸ್ತೆಯ ಮುಖಾಂತರ ತಮ್ಮ ಜಮೀನುಗಳಿಗೆ ಹೋಗುತ್ತಾರೆ ಎಂದರೆ ಸರಿ. ವಾದಿಯರು ತನ್ನ ವಾದ ಪತ್ರದ ಜೊತೆಗೆ ಯಾವ ತರಹದ ಹಾಥ ನಕಾಶೆಯನ್ನು ಹಾಜರುಮಾಡಿರುತ್ತಾನೆ ಎಂದು ನಾನು ನೋಡಿರುವುದಿಲ್ಲ. ವಾದಿಯರು ಸರ್ವೆ ನಂ. 635 ರ ಪಶ್ಚೀಮಕ್ಕೆ ಹಾಯಿದು ಉತ್ತರಕ್ಕೆ ಮುಖ ಮಾಡಿ ತಮ್ಮ ಜಮೀನುಗಳಿಗೆ ಹೋಗುತ್ತಾರೆ ಎಂದು ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ: ಇಲ್ಲ:</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/–

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.

## ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No**. 363/2018

**PW**:2

**ದಿನಾಂಕ 06.01.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್.ವಿ.ಕೆ. ವಕೀಲರಿಂದ:**

ನಾನು ಸಾಲೋಟಗಿಯಲ್ಲಿ ವಾಸಿಸುತ್ತಿದ್ದೇನೆ. ಸಾಲೋಟಗಿಯಲ್ಲಿ ನನಗೆ ಜಮೀನು ಇರುತ್ತದೆ. ನನ್ನ ಜಮೀನಿನ ಸರ್ವೆ ನಂಬರ ನನಗೆ ನೆನಪಿಲ್ಲ. ನಮ್ಮ ಜಮೀನಿನ ಒಂದು ಹೊಲದ ನಂತರ ವಾದಿಯರ ಜಮೀನು ಇರುತ್ತದೆ. ಒಂದನೇ ವಾದಿಯ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿಲ್ಲ. 1 ನೇ ವಾದಿಗೆ ಇಬ್ಬರು ಸಹೋದರರು ಅವರು ಕಲ್ಲಪ್ಪ ಮತ್ತು ಶಿವಯೋಗೆಪ್ಪ. ಸರ್ವೆ ನಂ.636 ಇದು 1 ನೇ ಪ್ರತಿವಾದಿಯು ಖರೀದಿ ಮಾಡಿರುತ್ತಾನೆ ಎಂದರೆ ಸಾಕ್ಷಿಯು ಅದು ಅವರ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಆಸ್ತಿಯನ್ನು ನೀವು ನೋಡಿರುತ್ತಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು 1 ನೇ ವಾದಿಯ ಆಸ್ತಿಯನ್ನು ಖರೀದಿ ಮಾಡಿರುತ್ತಾನೆ ಆದರೆ ಇನ್ನೊಂದು ಆಸ್ತಿಯನ್ನು ನಾನು ನೋಡಿರುವುದಿಲ್ಲ ಅಂತಾ ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಸೇರಿದ ಸರ್ವೆ ನಂ.365 ಇದು ಸರ್ವೆ ನಂ.366 ರ ಉತ್ತರ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ಸರ್ವೆ ನಂ.365 ರ ಪೂರ್ವ ದಿಕ್ಕಿಗೆ ಸರ್ಕಾರಿ ರಸ್ತೆ ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯ ಜಮೀನಿಗೆ ಹೊಂದಿಕೊಂಡಂತೆ ದರ್ಮಣ್ಣ ಮತ್ತು ವಿಠೋಬಾ ಇವರ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. 2 ನೇ ವಾದಿಯ ಜಮೀನಿನ ಪೂರ್ವ ದಿಕ್ಕಿಗೆ 1 ನೇ ವಾದಿಯ ಜಮೀನು ಬರುತ್ತದೆ. 1 ನೇ ಪ್ರತಿವಾದಿಯ ಜಮೀನಿನ ಪೂರ್ವ ದಿಕ್ಕಿಗೆ 1 ಜಮೀನು ಇರುತ್ತದೆ ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಜಮೀನಿಗೆ ದರ್ಮಣ್ಣ ಮತ್ತು ವಿಠೋಬಾ ಇವರ ಜಮೀನು ಹೊಂದಿಕೊಂಡಂತೆ ಇರುತ್ತದೆ ಎಂದರೆ ಸರಿಯಲ್ಲ. ದರ್ಮಣ್ಣ ಇವರಿಗೆ ಸಂಬಂಧಿಸಿದಂತೆ ಸರ್ವೆ ನಂ.636/2 ವಿಸ್ತೀರ್ಣ 3 ಎಕರೆ ಮತ್ತು 636/2 ಕ ಇದು ವಿಠೋಬಾ ಇವರಿಗೆ ಸಂಬಂಧಿಸಿರುತ್ತದೆ ಎಂದರೆ ಸಾಕ್ಷಿಯು ಸದರಿ ಜಮೀನುಗಳನ್ನು 1 ನೇ ವಾದಿಯ ಕಡೆಯಿಂದ ಅವರು ಖರೀದಿಸಿರುತ್ತಾರೆ ಅಂತಾ ನುಡಿಯುತ್ತಾರೆ. ವಾದಿಯರ ಜಮೀನಿನ ದಕ್ಷಿಣ ದಿಕ್ಕಿಗೆ ಶಿರಶ್ಯಾಡ ಜೋಡ ಸೀಮೆ ರಸ್ತೆ ಇರುತ್ತದೆ ಎಂದರೆ ಸರಿ. ವಾದಿಯರು ತಮ್ಮ ಜಮೀನಿಗೆ ಸಂಬೋಗಿಯ ಸರ್ಕಾರಿ ರಸ್ತೆಯಿಂದ ಬಂದು ಶಿರಶ್ಯಾಡ ಜೋಡ ರಸ್ತೆ ಸೀಮೆ ಕಡೆ ಪಶ್ಚಿಮಕ್ಕೆ ಮುಖ ಮಾಡಿ ತಮ್ಮ ಜಮೀನಿಗೆ ಹೋಗುತ್ತಾರೆ ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಆದರೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

**<u>ಮರು ವಿಚಾರಣೆ: ಇಲ್ಲ:</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.